Sri AZEEZ SAIT.—I want to ask how the taluka board can be expected to maintain these roads when the Government is taking the entire taxes on motor vehicles. There is some justification in my question.

Sri ALUR HANUMANTHAPPA.—I have just now explained the financial position of the Government. Government is not thinking of giving any share out of the resources that it receives from Motor Vehicles Taxation to the Taluka Boards.

Taking over of T. D. B, roads by P. W. D.

*Q.—164. Sri H. PUTTADASA (Sathanur).—

Will the Minister for Public Works be pleased to state:—

(*a*) whether there is any proposal to take over certain roads under Taluk Boards, under the management of Public Works Department;

(*b*) if so, the criteria for such a take over;

(*c*) whether any list of roads proposed to be taken over by the Government has been prepared;

(*d*) if so, the names and extents of roads included in that list in Ramanagaram Sub-Division?

A.—Sri ALUR HANUMANTHAPPA (Deputy Minister for Minor Irrigation) [On behalf of SRI VEERENDRA PATIL (Minister for Public Works)].—

(*a*) No.

(*b*) Does not arise.

(*c*) No.

(*d*) Does not arise in view of reply to clause (*c*) of the question.

ಶ್ರೀ ಎಚ್ ಪುಟ್ಟದಾನ.—ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಹಣವಿಲ್ಲವೆಂದು ಹೇಳುತ್ತೀರಿ. ತಾಲ್ಲೂಕ್ ಬೋರ್ಡಿನವರಿಗೆ ಈ ರಸ್ತೆಗಳ ಕೆಲಸ ಮಾಡಿಸಲು ತೊಂದರೆಯಾಗುತ್ತದೆ. ರಾಮನಗರದ ಕೆಲವು ರಸ್ತೆಗಳು ಚೆನ್ನಾಗಿಲ್ಲ. ಒಳ್ಳೆಯ ರಸ್ತೆಗಳು ಆ ಭಾಗದಲ್ಲಿ ಇಲ್ಲದಿರಲಿ ಎಂದು ನಿಮ್ಮ ಅಭಿಪ್ರಾಯವೆ?

†ಶ್ರೀ ಆಲೂರು ಹನುಮಂತಪ್ಪ.—ರಾಮನಗರ ಡಿವಿಜನ್‌ನಲ್ಲಿ ಅನೇಕ ರಸ್ತೆಗಳು ಲೋಕೋಪಯೋಗಿ ಇಲಾಖೆಗೆ ಸೇರಿವೆ. ಪ್ರಾಮುಖ್ಯವಾದ ಕೆಲವು ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯವರು ವಹಿಸಿಕೊಳ್ಳಬೇಕೆಂದು ಮಾನ್ಯ ಸದಸ್ಯರು ಸಲಹೆ ಕೊಟ್ಟರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, 164ನೇ ಪ್ರಶ್ನೆಗೆ ಕೊಟ್ಟಿರುವ ಉತ್ತರ ವಿಚಿತ್ರವಾಗಿದೆ. ಪ್ರತಿವರ್ಷ ಇಷ್ಟು ರಸ್ತೆಗಳನ್ನು ಪ್ರತಿ ಸರ್ಕಲ್‌ನಿಂದ ಲೋಕೋಪಯೋಗಿ ಇಲಾಖೆಯವರು ತೆಗೆದುಕೊಳ್ಳಬೇಕೆಂಬ ನಿಯಮವಿದೆ. ಇಲ್ಲಿ ಪ್ರಾಕಿರುವ ಪ್ರಶ್ನೆ ಇಡೀ ಸಂಸ್ಥಾನಕ್ಕೆ ಅನ್ವಯಿಸುತ್ತದೆ. ಇಲ್ಲಿ ಕೇಳಿರುವ ಪ್ರಶ್ನೆಗೆ ಉತ್ತರವಾಗಿ ಇಲ್ಲವೆಂದು ಹೇಳಿದರೆ ಸರಿಯೆ?

ಶ್ರೀ ಆಲೂರು ಹನುಮಂತಪ್ಪ —ನಾನು ಸಧ್ಯಕ್ಕೆ ಸಾಧ್ಯವಿಲ್ಲವೆಂದು ಹೇಳಿದೆ. ಈಗಾಗಲೇ ಲೋಕೋಪಯೋಗಿ ಇಲಾಖೆಯವರು 1958-59ನೇ ಸಾಲಿನಿಂದ ತಾಲ್ಲೂಕ್‌ಬೋರ್ಡಿಗೆ ಸೇರಿದಂತಹ 1,908 ಮೈಲಿ ನಾಲ್ಕೂವರೆ ಫರ್ಲಾಂಗ್ ರಸ್ತೆಗಳನ್ನು ವಹಿಸಿಕೊಂಡಿದ್ದಾರೆ. ಇದು ಸರ್ಕಾರದ ಗೆಜಿಟ್‌ನಲ್ಲಿ ಪ್ರಕಟವಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಡಿಸ್ಟ್ರಿಕ್ಟ್ ಬೋರ್ಡ್‌ನಲ್ಲಿದ್ದಂಥ ರಸ್ತೆಗಳು ಎರಡು ಮೂರು ತಾಲ್ಲೂಕ್‌ಗಳಿಗೆ ಸಂಪರ್ಕ ಕಲ್ಪಿಸುತ್ತಿದ್ದರೆ, ಅಂತಹ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯವರು ವಹಿಸಿಕೊಂಡಿದ್ದಾರೆ. ಇಂತಹ ರಸ್ತೆಗಳು ಇನ್ನೂ ಇದ್ದರೆ ಅವನ್ನು ವಹಿಸಿಕೊಳ್ಳುವುದಕ್ಕೆ ಯೋಚನೆ ಮಾಡುತ್ತೀವೆಂದು ಲೋಕೋಪಯೋಗಿ ಶಾಖೆಯ ಮಂತ್ರಿಗಳು ಹೇಳಿರಲಿಲ್ಲವೆ ?

ಶ್ರೀ ಆಲೂರು ಹನುಮಂತಪ್ಪ.—ಯಾವುದು ಪ್ರಾಮುಖ್ಯವಾದ ರಸ್ತೆ ಎಂದು ಮಾನ್ಯ ಸದಸ್ಯರು ಹೇಳುತ್ತಾರೋ, ಆ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿಕೊಳ್ಳುವುದಕ್ಕೆ ಯೋಚನೆ ಮಾಡಲಾಗುತ್ತದೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಭೂಕಂದಾಯವನ್ನು ರದ್ದು ಮಾಡಿದ ಮೇಲೆ ತಾಲ್ಲೂಕ್ ಬೋರ್ಡಿನವರಿಗೆ ಬರುವ ಆದಾಯ ಕಡಿಮೆಯಾಗುತ್ತದೆ. ಆದ್ದರಿಂದ ತಾಲ್ಲೂಕ್ ಬೋರ್ಡಿಗೆ ಸೇರಿರುವ ಎಲ್ಲಾ ರಸ್ತೆಗಳನ್ನೂ ಲೋಕೋಪಯೋಗಿ ಇಲಾಖೆಯವರೇ ಏತಕ್ಕೆ ವಹಿಸಿಕೊಳ್ಳಬಾರದು ?

ಶ್ರೀ ಆಲೂರು ಹನುಮಂತಪ್ಪ.—ಎಲ್ಲಾ ರಸ್ತೆಗಳನ್ನೂ ವಹಿಸಿಕೊಳ್ಳುವುದಕ್ಕಾಗುವುದಿಲ್ಲ. ಇತ್ತೀಚೆಗೆ ಕ್ಷಾಮ ಪರಿಹಾರಕ್ಕಾಗಿ ಕೆಲಸ ಮಾಡಿಸಿದಂತಹ ರಿಲೀಫ್ ರಸ್ತೆಗಳು ಇವೆ. ಇಂಟರ್ ವಿಲೇಜ್ ಕಮ್ಯುನಿಕೇಷನ್ ರಸ್ತೆಗಳು ಇವೆ. ತಾಲ್ಲೂಕ್ ಬೋರ್ಡಿನವರು ಸಹ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಲೋಕೋಪಯೋಗಿ ಇಲಾಖೆಯವರಿಗೆ ಎಷ್ಟು ಸಾಧ್ಯವೋ ಅಷ್ಟನ್ನು ವಹಿಸಿಕೊಳ್ಳುತ್ತಾರೆ.

ಶ್ರೀ ಸೋಲೂರು ಸಿದ್ದಪ್ಪ.—ಐ. ಸಿ. ಫಂಡ್‌ನಿಂದ ರಸ್ತೆಗಳ ದುರಸ್ತಿಗಾಗಿ 4 ಕೋಟಿ ರೂಪಾಯಿಗಳನ್ನು ಶ್ರೀಮಾನ್ ಚೆನ್ನಬಸಪ್ಪನವರು ಮಂತ್ರಿಗಳಾಗಿದ್ದಾಗ ಮಂಜೂರು ಮಾಡಿದ್ದರು. ಆ ಹಣದಿಂದ ರಸ್ತೆ ರಿಪೇರಿ ಮಾಡಿಸುವ ಕಾರ್ಯಕ್ರಮವೇನಾಯಿತು ?

ಶ್ರೀ ಆಲೂರು ಹನುಮಂತಪ್ಪ.—14,680 ಮೈಲಿಗಳ ಐ. ಸಿ. ರಸ್ತೆಗಳ ಕೆಲಸ ಅವರ ಕಾಲದಲ್ಲಿ ಆಗಿದೆ. ಸಧ್ಯಕ್ಕೆ ತಾಲ್ಲೂಕ್ ಬೋರ್ಡಿನವರೇ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗಿದೆ. ಅನೇಕ ಸಂದರ್ಭಗಳಲ್ಲಿ ಆ ವಿಚಾರ ಮಾನ್ಯ ಸಭೆಯಲ್ಲಿ ಚರ್ಚೆಯಾಗಿದೆ. ಚರ್ಚೆಗೆ ಉತ್ತರವನ್ನು ಸಹ ಕೊಟ್ಟಿದೆ.

ಶ್ರೀ ಸಿದ್ಧಯ್ಯ ಕಾಶೀಮಠ.—ಮಂತ್ರಿಗಳು ಮತ್ತು ಉಪಮಂತ್ರಿಗಳು ಬಂದಿರತಕ್ಕಂಥ ಮತ ಕ್ಷೇತ್ರಗಳಲ್ಲಿ ತಾಲ್ಲೂಕ್ ಬೋರ್ಡ್‌ಗಳಿಗೆ ಸೇರಿದ ರಸ್ತೆಗಳನ್ನು ತಮ್ಮ ಇಲಾಖೆಗೆ ಜಾಸ್ತಿ ತೆಗೆದು ಕೊಂಡಿರುವುದು ಮತ್ತು ಉಳಿದ ಸದಸ್ಯರ ಕ್ಷೇತ್ರಗಳಲ್ಲಿ ಕಡಿಮೆ ತೆಗೆದುಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಆಲೂರು ಹನುಮಂತಪ್ಪ.—ನಾನು ಒಪ್ಪುವುದಕ್ಕಾಗುವುದಿಲ್ಲ. ನನ್ನ ಮುಂದೆ 1958-59ನೇ ಸಾಲಿನಿಂದ ಇದುವರೆಗೆ ರಾಜ್ಯದ ಎಲ್ಲಾ ತಾಲ್ಲೂಕ್ ಬೋರ್ಡಿನಿಂದ ಪಿ. ಡಬ್ಲ್ಯು. ಡಿ. ಗೆ ವಹಿಸಿಕೊಂಡಂತಹ ರಸ್ತೆಗಳ ಪಟ್ಟಿ ಇದೆ. ಎಲ್ಲಾ ಭಾಗಗಳಿಂದಲೂ ಹೆಚ್ಚಿನ ರಸ್ತೆಗಳನ್ನು ವಹಿಸಿಕೊಂಡಿದ್ದೇವೆ.

ಶ್ರೀ ಎಲ್. ಶ್ರೀಕಂಠಯ್ಯ.—ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ ಎಂಬಂತೆ, ಹಳ್ಳಿಗಳಿಗೆ ವಾಹನ ಸೌಕರ್ಯಗಳನ್ನು ಕೊಡಿ ಎಂದರೆ ಒಳ್ಳೆಯ ರಸ್ತೆಗಳು ಇಲ್ಲ ಎನ್ನುತ್ತೀರಿ, ಒಳ್ಳೆಯ ರಸ್ತೆಗಳನ್ನು ಮಾಡಿಸಿಕೊಡಿ ಎಂದರೆ ಹಣವಿಲ್ಲವೆಂದು ಹೇಳುತ್ತೀರಿ, ಅಂದರೆ ಗ್ರಾಮಾಂತರ ಪ್ರದೇಶಗಳು ಮುಂದುವರಿಯುವಾರದು ಎಂಬುದು ನಿಮ್ಮ ಅಭಿಪ್ರಾಯವೆ ?

ಶ್ರೀ ಆಲೂರು ಹನುಮಂತಪ್ಪ.—ಬಹಳ ಮುಖ್ಯವಾದ ಸಲಹೆ. ಸರ್ಕಾರಕ್ಕೆ ಹಣ ಬೇಕು. ಸರ್ಕಾರಕ್ಕೆ ಹೆಚ್ಚು ಹಣ ಬರುವ ಮಾರ್ಗಗಳನ್ನು ಮಾನ್ಯ ಸದಸ್ಯರು ಹೇಳಿದರೆ ಒಳ್ಳೆಯದಾಗುತ್ತದೆ.

ಶ್ರೀ ಬಿ. ನಂಜಪ್ಪ.—ತಾಲ್ಲೂಕು ಅಭಿವೃದ್ಧಿ ಮಂಡಲಗೆ ಸೇರಿದ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯವರು ವಹಿಸಿಕೊಳ್ಳುತ್ತಿದ್ದಾರೆಂದು ಸುಮಾರು ನಾಲ್ಕೈದು ವರ್ಷಗಳಿಂದ ಸರ್ಕಾರದವರು ಹೇಳುತ್ತಿದ್ದರೂ ಇದುವರೆಗೂ ಅನೇಕ ರಸ್ತೆಗಳ ರಿಪೇರಿ ಮಗ್ಗೆರೆ ಮಾಡಲಲ್ಲ. ಈಗ ತಾಲ್ಲೂಕು ಬೋರ್ಡಿನವರು ಆ ಕೆಲಸವನ್ನು ಬಿಟ್ಟರು, ಸಂಬಂಧಪಟ್ಟ ಇಲಾಖೆಯವರು ಬಿಟ್ಟರು. ಇದರಿಂದ ಭಾರೀ ತೊಂದರೆಯಾಗಿದೆ. ತಾಲ್ಲೂಕು ಬೋರ್ಡು ರಸ್ತೆಗಳನ್ನು ಪಿ. ಡಬ್ಲ್ಯು. ಡಿ. ಯವರು ವಹಿಸಿಕೊಳ್ಳುವುದಾಗಿ ಸುಮ್ಮನೆ ಬೋರ್ಡುಗಳನ್ನು ಹಾಕುತ್ತಾರೆ, ಇದು ಸರಿಯಲ್ಲ. ಕೂಡಲೇ ಆ ಕೆಲಸ ಕಾರ್ಯಗಳನ್ನು ಪಿ. ಡಬ್ಲ್ಯು. ಡಿ. ಯವರು ತೆಗೆದು ಕೊಳ್ಳುತ್ತಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ ತೆಗೆದುಕೊಂಡಿರತಕ್ಕ ರಸ್ತೆ ಅತಿ ಮುಖ್ಯ ವಾದುದಾಗಿದೆ. ಆದರೆ ಎಲ್ಲ ಕಲ್‌ವರ್ಟ್‌ಸ್ ಮತ್ತು ಪೋರಿಗಳು ರಿಪೇರಿಯಾಗಬೇಕೋ ಅವನ್ನು ಮಾಡಿ ಅಲ್ಲಿರತಕ್ಕ ರಸ್ತೆಗಳ ರಿಪೇರಿ ಸಹ ಆಗುತ್ತದೆ. ನಮಗೆ ಹೆಚ್ಚು ಹಣ ಬಂದಾಗ ಸರಿಯಾದ ರಸ್ತೆಗಳನ್ನು ಮಾಡಬೇಕೆಂದು ಸರ್ಕಾರದ ಉದ್ದೇಶ.

Taking over of Byadgi-Tiluvalli Road by P. W. D.

*Q.—334. Sri M. G. BANAKAR (Byadagi).—

Will the Minister for Public Works be pleased to state:—

whether they would contemplate taking over to Public Works Department the Byadagi-Tiluvalli Road *via* Gummenahalli, Angaragatti, Masunagi, Kalagonda, Tummur, Hirehalli, Chikkabasuru and Galipuji as the said road provides communication facilities between Byadagi Market and 15 to 20 villages which are on the eastern side?

*A.—Sri ALUR HANUMANTHAPPA (Deputy Minister for Minor Irrigation) [On behalf of Sri Veerendra Patil (Minister for Public Works)].—

Will be considered at the appropriate time.

ಶ್ರೀ ಎಂ. ಜಿ. ಬಣಕಾರ್.—ನನ್ನ ಪ್ರಶ್ನೆಗೆ ಉತ್ತರವಾಗಿ ಸೂಕ್ತ ಸಮಯದಲ್ಲಿ ಇದನ್ನು ಪರಿಶೀಲಿಸರಾಗುವುದು ಎಂದು ಹೇಳಿದೆ. ಆದರೆ 20 ಹಳ್ಳಿಯ ಜನಗಳು ಬ್ಯಾಡಗಿ ಮಾರ್ಕೆಟ್ಟಿಗೆ ಬರಬೇಕಾದರೆ ಸುಮಾರು 32 ಮೈಲಿಗಳ ಸುತ್ತಳತೆಯಿಂದ ಬರಬೇಕಾಗಿದೆ. ಕೆಲವರು 12 ಮೈಲಿ ಗಳಿಂದ ಬರಬೇಕಾಗಿದೆ. ನಿಮ್ಮ ಸೂಕ್ತ ಸಮಯ ಯಾವುದು? ಏಕೆಂದರೆ ಊರುಗಳು ಇಲ್ಲದ ಕಡೆಗಳಲ್ಲೆಲ್ಲಾ ಪಿ. ಡಬ್ಲ್ಯೂ. ಡಿ. ರಸ್ತೆಗಳಾಗುತ್ತಿವೆ. ಅದು ಸರಿಯೇ?

† ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಹೇಳತಕ್ಕ ವಿಷಯ ಬಹಳ ಪ್ರಾಮುಖ್ಯ ವಾದುದು. ಈ ರಸ್ತೆ ಅನೇಕ ಗ್ರಾಮಗಳಿಗೆ ಸಹಾಯವಾಗುವುದರ ಜೊತೆಗೆ ಜನಗಳು ಕೋರ್ಟು ಮತ್ತು ತಾಲ್ಲೂಕು ಆಫೀಸುಗಳಿಗೆ ಬರಲು ಹತ್ತಿರವಾಗುವುದರಿಂದ ಇದನ್ನು ಮುಂದಿನ ಸಾರಿ ಗಮನದಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ಎನ್. ಚಿಕ್ಕೇಗೌಡ.—ಕಳೆದ ಐದು ವರ್ಷಗಳಲ್ಲಿ ತಾಲ್ಲೂಕಾ ಮಳೆ ಎಷ್ಟೆಷ್ಟು ಮೈಲಿಗಳ ರಸ್ತೆಯನ್ನು ಒಂದೊಂದು ತಾಲ್ಲೂಕಿನಲ್ಲಿ ಪಿ. ಡಬ್ಲ್ಯೂ. ಡಿ. ಯವರು ತೆಗೆದುಕೊಂಡಿದ್ದಾರೆ?

ಶ್ರೀ ಆಲೂರು ಹನುಮಂತಪ್ಪ.—ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಎಷ್ಟೆಷ್ಟು ರಸ್ತೆಗಳನ್ನು ಪಿ. ಡಬ್ಲ್ಯೂ. ಡಿ. ಯವರು ತೆಗೆದುಕೊಂಡಿದ್ದಾರೆಂದು ಹೇಳುವುದಕ್ಕೆ ಈಗ ಸಾಧ್ಯವಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಸೂಕ್ತ ಸಮಯ ಎಂದರೆ, ಈಗ ನಿಮಗೆ ಸಮಯವಿಲ್ಲವೇ?

ಶ್ರೀ ಆಲೂರು ಹನುಮಂತಪ್ಪ.—ಹೋದ ಬಾರಿ ರಸ್ತೆಗಳನ್ನು ತೆಗೆದುಕೊಂಡಿದ್ದು ಈಗಾಗಲೇ ಗೆಜೆಟ್ಟಿನಲ್ಲಿ ಪ್ರಕಟವಾಗಿದೆ. ಆದರೆ ಮುಂದಿನ ಡಿಸೆಂಬರ್ ಹೊತ್ತಿಗೆ ಎಷ್ಟು ರಸ್ತೆಗಳನ್ನು ತೆಗೆದು ಕೊಳ್ಳುತ್ತೇವೆಂದು ಈಗ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಸೂಕ್ತ ಸಮಯವೆಂದರೆ ನಿಮ್ಮ ಅಭಿಪ್ರಾಯದಲ್ಲಿ ಯಾವ ಕಾಲ?

ಶ್ರೀ ಆಲೂರು ಹನುಮಂತಪ್ಪ.—ಸೂಕ್ತ ಸಮಯ ಬರುವವರೆಗೂ ಸುಧಾರಿಸಬೇಕು.

ಶ್ರೀ ಎನ್. ಎಂ. ಕೊಟ್ರಬಸವಯ್ಯ (ಸೋಗಿ).—ತಾಲ್ಲೂಕು ಬೋರ್ಡ್ ರಸ್ತೆಗಳನ್ನು ಲೋಕೋಪಯೋಗಿ ಶಾಖೆಯವರು ತೆಗೆದುಕೊಳ್ಳುವುದಕ್ಕೇನಾದರೂ ಪಾಲಿಸಿಯನ್ನು ಇಟ್ಟು ಕೊಂಡಿದ್ದೀರಾ?